# ಅಂದು ಅಮ್ಮ; ಇಂದು ಮಗ

**ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಚಿಕ್ಕಮಗಳೂರು ಜಿಲ್ಲೆ ಕಳಸಾಪುರ ಸಮೀಪದ ಬೆಳವಾಡಿ ವೀರನಾರಾಯಣ ದೇವಾಲಯಕ್ಕೆ ಹೋಗಿದ್ದೆ. ಹೊಯ್ಸಳರ ಶಿಲ್ಪಕಲೆಯುಳ್ಳ ದೇವಾಲಯದೊಳಗೆ ಕಲಾತ್ಮಕ ಕಂಬದ ಬಳಿ ನಿಂತು ಫೋಟೊ ತೆಗೆಸಿಕೊಂಡಿದ್ದೆ. ಆದಾಗಿ ಎರಡೂವರೆ ದಶಕಗಳ ಬಳಿಕ ಮತ್ತೆ ನನ್ನ ಮಗನ ಜೊತೆ ಹೋಗಿ ಅದೇ ಕಂಬದ ಬಳಿ ನಿಲ್ಲಿಸಿ ಫೋಟೊ ತೆಗೆದೆ. 'ಅಮ್ಮ–ಮಗ' ಒಂದೇ ಜಾಗದಲ್ಲಿ; ಅದೂ 25 ವರ್ಷಗಳ ಬಳಿಕ...!**

**■ ಕೆ.ಎಸ್. ನೀತಾ ಹಾಸನ**

ಕೆಲವು ದಿನಗಳ ಹಿಂದೆ ಹಾಸನದ ತವರು ಮನೆಗೆ ಪತಿ ಅಭಿರಾಂ ಮತ್ತು ಮಗ ಅಥರ್ವನೊಡನೆ ಹೋಗಿದ್ದೆ. ಆಗ 'ಬೆಳವಾಡಿಗೆ ಹೋಗಿ ಬರೋಣ' ಎಂದು ಅಮ್ಮ ಹೇಳಿದರು. ಚಿಕ್ಕಮಗಳೂರು ಜಿಲ್ಲೆಯ ಕಳಸಾಪುರ ನಮ್ಮ ತಂದೆಯವರ ಮೂಲಸ್ಥಳ. ಅಲ್ಲಿಗೆ ಕೇವಲ ನಾಲ್ಕು ಮೈಲಿ ದೂರದಲ್ಲಿರುವ ಬೆಳವಾಡಿಯಲ್ಲಿ ಉದ್ಭವ ಗಣಪತಿ ದೇವಸ್ಥಾನವಿದೆ. ಆಗಾಗ್ಗೆ ವಿಶೇಷ ಸಂದರ್ಭಗಳಲ್ಲಿ ಅಲ್ಲಿಗೆ ಹೋಗುತ್ತಿರುತ್ತೇವೆ. ಮಗು ಹುಟ್ಟಿದ ಮೇಲೆ ಹೋಗಿರಲೇ ಇಲ್ಲ.

ಬೆಳವಾಡಿಯಲ್ಲಿಯೇ ಹೊಯ್ಸಳರ ಕಾಲದ ವೀರನಾರಾಯಣ ದೇವಾಲಯವೂ ಇದೆ. ಬೇಲೂರು ಹಳೇಬೀಡು ದೇವಾಲಯಗಳಂತೆಯೇ ಅದ್ಭುತ ವಾಸ್ತುಶಿಲ್ಪಕಲೆಯಿಂದ ಕಂಗೊಳಿಸುತ್ತದೆ. ನಮ್ಮ ತಂದೆ ಕೆ.ಪಿ. ಸತ್ಯನಾರಾಯಣ ಹವ್ಯಾಸಿ ಛಾಯಾಗ್ರಾಹಕರು ಮತ್ತು ಬರಹಗಾರರು. ಇಪ್ಪತ್ತು, ಇಪ್ಪತ್ತೈದು ವರ್ಷಗಳ ಹಿಂದೆ ಈ ದೇವಾಲಯ ಹಾಳು ಸುರಿಯುತ್ತಿತ್ತು. ಸರಿಯಾದ ನಿರ್ವಹಣೆಯೂ ಇರಲಿಲ್ಲ. ಹಲವಾರು ಪತ್ರಿಕೆಗಳಲ್ಲಿ ಚಿತ್ರಲೇಖನ ಪ್ರಕಟಿಸುವ ಮೂಲಕ ದೇವಾಲಯ ಜನರ ಗಮನಕ್ಕೆ ಬರುವಂತೆ ಪ್ರಯತ್ನಿಸಿದ್ದರು. 1994ರಲ್ಲಿ ನಮ್ಮ ನೆಚ್ಚಿನ 'ಸುಧಾ' ದಲ್ಲಿಯೂ ಬೆಳವಾಡಿ ಕುರಿತ ಚಿತ್ರಲೇಖನ ಪ್ರಕಟವಾಗಿತ್ತು.

1992ರಲ್ಲಿ ಬೆಳವಾಡಿಯ ವೀರನಾರಾಯಣನ ದೇವಾಲಯಕ್ಕೆ ಹೋಗಿದ್ದಾಗ ಅಲ್ಲಿನ ಕಲಾತ್ಮಕ ಕಂಬವೊಂದರ ಬಳಿ ನನ್ನನ್ನು ನಿಲ್ಲಿಸಿ ಫೋಟೊ ತೆಗೆದಿದ್ದರು. ನನಗಾಗ ಒಂದೂ ಕಾಲು ವರ್ಷ. ಕಪ್ಪು ಬಿಳುಪಿನ ಆ ಚಿತ್ರ ನೋಡಿದವರೆಲ್ಲರ ಪ್ರಶಂಸೆಗೆ ಪಾತ್ರವಾಗಿ ಪತ್ರಿಕೆಗಳಲ್ಲೂ ಪ್ರಕಟವಾಗಿತ್ತು. ಛಾಯಾಚಿತ್ರ ಸ್ಪರ್ಧೆಗಳಲ್ಲಿಯೂ ಭಾಗವಹಿಸಿತ್ತು.





ನನಗೆ ಮಗ ಹುಟ್ಟಿದಾಗಿನಿಂದ ತಂದೆಯವರಲ್ಲಿ ಒಂದು ಆಸೆ ಮೊಳೆತಿತ್ತು. ಮೊಮ್ಮಗನನ್ನು ಅದೇ ಕಂಬದ ಬಳಿ ನಿಲ್ಲಿಸಿ ಫೋಟೊ ತೆಗೆಯಬೇಕು ಎನ್ನುವುದು. ಮೊನ್ನೆ ಬೆಳವಾಡಿಗೆ ಹೋದಾಗ ಅವರ ಈ ಆಸೆ ಈಡೇರಿತು. ಅಥರ್ವ ಈಗಷ್ಟೇ ಒಂಭತ್ತು ತುಂಬಿ ಹತ್ತನೆಯ ತಿಂಗಳಿಗೆ ಕಾಲಿಟ್ಟಿದ್ದಾನೆ. ಏನಾದರೂ ಆಸರೆ ಸಿಕ್ಕರೆ ಹಿಡಿದು ಎದ್ದು ನಿಲ್ಲುತ್ತಾನೆ. ಕಂಬದ ಎದುರು ಒಂದು ಕಟ್ಟೆ ಇರುವುದರಿಂದ ಅದನ್ನು ಹಿಡಿದು ನಿಂತುಕೊಂಡ. ತಂದೆಯವರು ಹತ್ತಾರು ಫೋಟೊ ಕ್ಲಿಕ್ಕಿಸಿದರು. ಒಂದು ಚಿತ್ರದಲ್ಲಿ ಅವರು ಬಯಸಿದ ಪೋಸ್ ಸಿಕ್ಕಿತು. ಆಗ ಅವರ ಖುಷಿಗೆ ಪಾರವೇ ಇಲ್ಲ. ಮನೆಗೆ ಬಂದ ತಕ್ಷಣ ಆ ಎರಡೂ ಚಿತ್ರಗಳನ್ನು ಒಂದರ ಪಕ್ಕ ಒಂದು ಬರುವಂತೆ ಕೊಲಾಜ್ ಮಾಡಿ ಸಂಭ್ರಮಿಸಿದರು.

ಎರಡು ತಲೆಮಾರಿನ ವ್ಯಕ್ತಿಗಳು ಒಂದೇ ಸ್ಥಳದಲ್ಲಿ ನಿಂತು ತೆಗೆಸಿಕೊಂಡ ಈ ಚಿತ್ರಗಳು ಸವಿನೆನಪುಗಳ ಸರಮಾಲೆಯನ್ನೇ ಹೊಂದಿದೆ. ನೋಡಿದವರ ಮನದಲ್ಲಿ ವಿಭಿನ್ನ ಭಾವನೆಗಳು ಮೂಡಲು ಸಹಕಾರಿಯಾಗಿದೆ. ಅಪ್ಪನ ಮಿತ್ರರೊಬ್ಬರು ಹರಸಿದ್ದಾರೆ 'ನಿಮ್ಮ ಮೊಮ್ಮಗನ ಮಗುವನ್ನೂ ಅದೇ ಸ್ಥಳದಲ್ಲಿ ನಿಲ್ಲಿಸಿ ಫೋಟೊ ತೆಗೆಯುವಂತಾಗಲಿ' ಎಂದು. ಸಾಧ್ಯವಾದರೆ ಅದೊಂದು ದಾಖಲೆಯೂ ಆದೀತು! ■